ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಚುನಾವಣೆಗೆ ರಾಜ್ಯಸಭೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ಪ್ರೀಮಿಯರ್ ದಿನಾಂಕ : DATE : 10/6/2012

ಪುಟ 10

ಎಚ್.ಡಿ. ದೇವೇಗೌಡರ ಬಳಿ ಮೂರು ಅಂಬಾಸಡರ್ ಕಾರು

ಬೆಂಗಳೂರು: ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಬಳಿ 1974ರ ಮಾಡೆಲ್‌ನ ಅಂಬಾಸಡರ್ ಸೇರಿ ಮೂರು ಅಂಬಾಸಡರ್ ಕಾರುಗಳಿವೆ. ಅವರ ಪತ್ನಿ ಚನ್ನಮ್ಮ ಅವರ ಹೆಸರಿನಲ್ಲಿ ಎರಡು ಟ್ರ್ಯಾಕ್ಟರ್‌ಗಳಿವೆ.

ರಾಜ್ಯಸಭಾ ಚುನಾವಣೆಗೆ ನಾಮಪತ್ರದೊಂದಿಗೆ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ದೇವೇಗೌಡರು ಆಸ್ತಿ ವಿವರ ನೀಡಿದ್ದು, ಅವರಿಗಿಂತ ಪತ್ನಿ ಚನ್ನಮ್ಮ ಹೆಚ್ಚು ಆಸ್ತಿ ಹೊಂದಿದ್ದಾರೆ.

ದೇವೇಗೌಡರ ಬಳಿ 72,60,060 ರೂ. ಹಾಗೂ ಅವರ ಪತ್ನಿ ಚನ್ನಮ್ಮ ಬಳಿ 2,14,07,031 ರೂ. ಚರಾಸ್ತಿ ಇದೆ. ದೇವೇಗೌಡರು ಒಟ್ಟು 2,45,083 ರೂ. ನಗದು ಹೊಂದಿದ್ದರೆ ಚನ್ನಮ್ಮ ಅವರು 2,61,590 ರೂ. ಹೊಂದಿದ್ದಾರೆ. ದೇವೇಗೌಡರ ಬಳಿ 50 ಸಾವಿರ ಮೌಲ್ಯದ ಚಿನ್ನಾಭರಣ ಹಾಗೂ ಚನ್ನಮ್ಮ ಅವರ ಬಳಿ 6.50 ಲಕ್ಷ ರೂ. ಮೌಲ್ಯದ ಚಿನ್ನಾಭರಣಗಳಿವೆ.

ದೇವೇಗೌಡರು ಒಟ್ಟು 41.28 ಲಕ್ಷ ರೂ. ಮೌಲ್ಯದ ಕೃಷಿ ಭೂಮಿ ಹೊಂದಿದ್ದರೆ, ಚನ್ನಮ್ಮ ಅವರು 1.17 ಕೋಟಿ ರೂ. ಮೌಲ್ಯದ ಕೃಷಿ ಭೂಮಿ ಹಾಗೂ ಮನೆ ಹೊಂದಿದ್ದಾರೆ.

ಪತ್ನಿಗೆ ಗೌದರ ಸಾಲ: ದೇವೇಗೌಡರು ಪತ್ನಿ ಚನ್ನಮ್ಮ ಅವರಿಗೆ 6.27 ಲಕ್ಷ ರೂ. ಸಾಲ ನೀಡಿದ್ದರೆ, ಚನ್ನಮ್ಮ ಅವರು ಮೊಮ್ಮಗ ಸೂರಜ್‌ಗೆ 78 ಲಕ್ಷ ರೂ. ಸಾಲ ನೀಡಿದ್ದಾರೆ. ದೇವೇಗೌಡರು ಪಕ್ಷದ ಮುಖಂಡ ಬಾಗೇಗೌಡ ಹಾಗೂ ಪುತ್ರಿ ಅನುಸೂಯ ನೇರಿ ಹಲವರ ಬಳಿ 97.98 ಲಕ್ಷರೂ. ಸಾಲ ಪಡೆದುಕೊಂಡಿದ್ದಾರೆ.

ಕಡಾಡಿ ಬಳಿ ಇನೋವಾ ಕಾರು

ಬಿಜೆಪಿ ಅಭ್ಯರ್ಥಿಯಾಗಿ ರಾಜ್ಯಸಭೆ ಚುನಾವಣೆಗೆ ಸ್ಪರ್ಧಿಸಿರುವ ಈರಣ್ಣ ಕಡಾಡಿ ಟೊಯೊಟಾ ಇನೋವಾ ಕಾರು ಹೊಂದಿದ್ದಾರೆ. ಈರಣ್ಣ ತಮ್ಮ ಪತ್ನಿ ಹಾಗೂ ಇಬ್ಬರು ಪುತ್ರರ ಹೆಸರಿನಲ್ಲೂ ಸ್ಥಿರ, ಚರ ಆಸ್ತಿ ಹೊಂದಿದ್ದಾರೆ.

ಚರಾಸ್ತಿ: 1,02,62,417 ರೂ., 1 ಟೊಯೋಟಾ ಇನೋವಾ ಕಾರು, 60 ಗ್ರಾಂ ಚಿನ್ನ **ಸ್ಥಿರಾಸ್ತಿ:** 1,33,00,000 ರೂ.

ಪತ್ನಿ ಸುಮಿತ್ರ: ಚರಾಸ್ತಿ: 9,26,079 ರೂ., 100 ಗ್ರಾಂ ಚಿನ್ನ **ಸ್ಥಿರಾಸ್ತಿ:** 11,28,000 ರೂ.

ಪುತ್ರ ಸತೀಶ್: ಚರಾಸ್ತಿ: 11,01,579 ರೂ., **ಸ್ಥಿರಾಸ್ತಿ :** 24,50,000 ರೂ.

ಪುತ್ರ ಸಂಜಯ್: ಚರಾಸ್ತಿ: 8,04,941 ರೂ., **ಸ್ಥಿರಾಸ್ತಿ:** 22,60,000 ರೂ.

ಈರಣ್ಣ ಕಡಾಡಿ ಒಟ್ಟು ಆಸ್ತಿ ಮೌಲ್ಯ: 3,32,32,008 ರೂ.

ಗಸ್ತಿ ಬಜಾಜ್ ಸ್ಕೂಟರ್ ಓನರ್

ಬಿಜೆಪಿಯ ಮತ್ತೊಬ್ಬ ಅಭ್ಯರ್ಥಿ ಅಶೋಕ್ ಗಸ್ತಿ 1996ರ ಮಾಡೆಲ್‌ನ ಬಜಾಜ್ ಸ್ಕೂಟರ್ ಹೊಂದಿರುವುದಾಗಿ ಅಫಿಡವಿಟ್‌ನಲ್ಲಿ ಉಲ್ಲೇಖಿಸಿದ್ದಾರೆ. ಜತೆಗೆ ಇವರು ಪತ್ನಿ ಮತ್ತು ಇಬ್ಬರು ಪುತ್ರಿಯರ ಹೆಸರಿನಲ್ಲಿ ಚರಾಸ್ತಿ ಹೊಂದಿದ್ದಾರೆ.

ಚರಾಸ್ತಿ: 2,85,673 ರೂ., ಬಜಾಜ್ ಸ್ಕೂಟರ್ (1996ರ ಮಾಡೆಲ್)

ಪತ್ನಿ ಸುಮಾ: 50 ಗ್ರಾಂ ಚಿನ್ನ 100 ಗ್ರಾಂ ಬೆಳ್ಳಿ, 4,45,375 ರೂ.

ಪುತ್ರಿ ನೇಹಾ: 40 ಗ್ರಾಂ ಚಿನ್ನ 2,05,000 ರೂ. ಮೌಲ್ಯದ ಚರಾಸ್ತಿ

ಪುತ್ರಿ ನಿತ್ಯಾ: 20 ಗ್ರಾಂ ಚಿನ್ನ 2,04,000 ರೂ. ಚರಾಸ್ತಿ